ನೆರವು ನೀಡಿದ್ದಾರೆ. ಈ ಹಣದ ನೆರವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲಾಗಿದೆ. ರಾಯಚೂರು 4ನೇ ಘಟಕದ ನಿರ್ಮಾಣಕ್ಕೆ ಒ.ಇ.ಸಿ.ಎಫ್. ಜಪಾನ್ ಸಂಸ್ಥೆಯು ಹಣಕಾಸು ನೆರವು ನೀಡಿದ್ದು, ಇದರ ಮೊತ್ತ 21342 ಎಂ.ಜೆ.ವೈ ಆಗಿದೆ. ಈ ನೆರವಿನ ಹಣವನ್ನು 30.6.97ರಲ್ಲಿ ಪೂರ್ತಿಯಾಗಿ ಉಪಯೋಗಿಸಿ ಕೊಳ್ಳಲಾಗಿದೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

ಈ ಸಂಸ್ಥೆಯು ಸ್ಥಾಪಿಸಲ್ಪಟ್ಟ ವರ್ಷದಿಂದ (1995) ಕರ್ನಾಟಕ ಸರ್ಕಾರವು ಈ ಕೆಳಕಂಡ ಮೊಬಲಗನ್ನು ಅನುದಾನದ ಮೂಲಕ ಅಸಂಪ್ರದಾಯಕ ಇಂಧನ ಮೂಲಗಳಿಗೆ ಒದಗಿಸಿದೆ.

ವರ್ಷ	ರೂ. ಲಕ್ಷಗಳಲ್ಲಿ
1995-96	35
1996-97	65
1997-98	78
ಒಟ್ಟು ಮೊತ್ತ	**ರೂ. 178 ಲಕ್ಷಗಳು**

ವರದಿಯನ್ನು ಒಪ್ಪಿಸುವುದು

ಶ್ರೀ ವಿ.ಎಸ್. ಕೌಜಲಗಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) : ಆಹಾರ ಮತ್ತು ನಾಗರೀಕ ಸರಬರಾಜು ಸಮಿತಿಯ 36ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಶ್ರೀ ಕೆ. ಅಮರನಾಥ್ ಶೆಟ್ಟಿ ಪರವಾಗಿ (ಶ್ರೀ ಕುಂಬೈ ಸುಂದರರಾವ್) : ಹಕ್ಕುಭಾದ್ಯತೆಗಳ ಸಮಿತಿಯ ಸದಸ್ಯನಾದ ನಾನು, ವಿಧಾನ ಸಭೆಯ ಹಕ್ಕುಭಾದ್ಯತೆಗಳ ಸಮಿತಿಯ 2ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ (ಅಧ್ಯಕ್ಷರು, ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ) : ಡಾ: ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳವರಿಗೆ ಮನೆಗಳ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯವರು 15 ಕೋಟಿ ರೂಪಾಯಿಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಪಡೆದು ದುರುಪಯೋಗ ಮಾಡಿರುವ ಬಗ್ಗೆ 80ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.